# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕೌಶಲ್ಯ ಮಿಷನ್ ಘಟಕ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಗಳಲ್ಲಿ ಅವಶ್ಯವಿರುವ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ: ಸಿಆಸುಇ 164 ಸಲುಸೇ 2016, ದಿನಾಂಕ:24-09-2016.

2. ಸರ್ಕಾರಿ ಆದೇಶ ಸಂ: ಕೌಉಜೀಇ 152 ಕೈತಇ 2017, ದಿನಾಂಕ:08-05-2017.

*****

ಪ್ರಸ್ತಾವನೆ:

ಕರ್ನಾಟಕ ಸರ್ಕಾರವು ರಾಜ್ಯ ಯುವಜನತೆಗೆ ಯೋಗ್ಯ ಉದ್ಯೋಗಗಳನ್ನು ಹಾಗೂ ಅವಶ್ಯಕ ಕೌಶಲ್ಯಗಳನ್ನು ಹೊಂದಲು ಮತ್ತು ಸುಸ್ಥಿರ ಜೀವನೋಪಾಯಗಳನ್ನು ಪ್ರೋತ್ಸಾಹಿಸಲು ನೇರವಾಗಿ ಮುಖ್ಯಮಂತ್ರಿಗಳ ನಿಯಂತ್ರಣದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದ ಮೂಲಕ ಸೃಜಿಸಲಾಗಿದೆ. ಎಲ್ಲಾ ಇಲಾಖೆಗಳ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಯೋಜನೆಗಳ ಉಸ್ತುವಾರಿಯನ್ನು ಈ ಇಲಾಖೆಯಡಿ ತರಲಾಗಿದೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಹೊಸದಾಗಿ ಸೃಜಿಸಿರುವುದರಿಂದ ಈ ಇಲಾಖೆಗೆ ವಹಿಸಿದ ಹೆಚ್ಚಿನ ಚಟುವಟಿಕೆಗಳು ಉದ್ಯೋಗ ಮತ್ತು ತರಬೇತಿ ಇಲಾಖೆಯ ಅಧೀನದಲ್ಲಿ ಬರುತ್ತವೆ. ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಈಗಿರುವ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಅಧಿಕಾರಿಗಳ ಮತ್ತು ಸಿಬ್ಬಂದಿಯ ಕೊರತೆಯಿದೆ. ಪ್ರತಿ ವರ್ಷ 5 ಲಕ್ಷ ಯುವಜನರಿಗೆ ತರಬೇತಿ ನೀಡುವ ಕೆಲಸ ಬೃಹತ್ ಪ್ರಮಾಣದ್ದಾಗಿರುತ್ತದೆ, ಅದರಲ್ಲಿ ಅಭ್ಯರ್ಥಿಗಳ ಕ್ರೋಢೀಕರಣ, ವೃತ್ತಿ ತರಬೇತಿ ಸಂಸ್ಥೆಗಳ ಆಯ್ಕೆ ಮತ್ತು ಮಾನ್ಯತೆ, ವೃತ್ತಿವಾರು ಗುರಿಗಳ ಹಂಚಿಕೆ, ಪಠ್ಯಕ್ರಮ, ತರಬೇತಿ, ಗುಣಮಟ್ಟದ ತರಬೇತಿಗಾಗಿ ಸೂಕ್ತ ಉಸ್ತುವಾರಿ, ಮೌಲ್ಯಮಾಪನ, ಪ್ರಮಾಣೀಕರಣ ಇತ್ಯಾದಿಗಳನ್ನು ನೇರವಾಗಿ ನೋಡಿಕೊಳ್ಳುವುದಲ್ಲದೆ ವಿವಿಧ ಇಲಾಖೆಗಳೊಂದಿಗೆ ಸಮನ್ವಯ, ಎನ್ಎಸ್ ಡಿಸಿ, ಎಸ್ಎಸ್ಸಿ ಗಳೊಂದಿಗೆ ಸಂಪರ್ಕವನ್ನು ಹೊಂದಬೇಕಾಗುತ್ತದೆ. ಇದಕ್ಕಾಗಿ ಪೂರಕವಾದ ಆಡಳಿತ ವ್ಯವಸ್ಥೆಯ ಅವಶ್ಯಕತೆಯಿದೆ.

ಅಲ್ಲದೇ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳ ಅನುಷ್ಠಾನವನ್ನು ಮಿಷನ್ ಮೋಡ್ ಮೂಲಕ ಕೈಗೊಂಡು ನಿರೀಕ್ಷಿತ ಫಲಿತಾಂಶ ಮತ್ತು ಫಲಶೃತಿಯನ್ನು ಸಾಧಿಸಲು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಮಿಷನ್‌ಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದ ಮೂಲಕ ರಚಿಸಿದೆ. ಮೇಲಿನ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಸ್ವೀಕೃತವಾಗುವ ಅನುದಾನ, ದೇಣಿಗೆ, ಇತ್ಯಾದಿ ಹಣವನ್ನು ಕರ್ನಾಟಕ ಕೌಶಲ್ಯ ಮಿಷನ್ ನಿಧಿಯಡಿ ಜಮೆ ಮಾಡಿ ವಿವಿಧ ಚಟುವಟಿಕೆಗಳಿಗೆ ವಿನಿಯೋಗಿಸಲಾಗುತ್ತದೆ. ಅದಕ್ಕಾಗಿ ಲೆಕ್ಕಪತ್ರ ಶಾಖೆಯ ಅವಶ್ಯಕತೆಯಿದೆ.

ಜಿಲ್ಲಾ ಮಟ್ಟದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಚಟುವಟಿಕೆಗಳನ್ನು ಕೈಗೊಳ್ಳಲು ಜಿಲ್ಲಾಮಟ್ಟದಲ್ಲಿ ಯಾವುದೇ ಕಛೇರಿಗಳಿರುವುದಿಲ್ಲ. ಇಲಾಖೆಯ ಯೋಜನೆಗಳ ಅನುಷ್ಠಾನ ಮತ್ತು ಉಸ್ತುವಾರಿಯನ್ನು ಕೈಗೊಳ್ಳಲು ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಕೌಶಲ್ಯ ಮಿಷನ್‌ಗೆ ನೆರವಾಗಲು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಯನ್ನು ಸ್ಥಾಪಿಸುವ ಅವಶ್ಯಕತೆಯಿದೆ.

ಮೇಲಿನ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜ್ಯ ಮಟ್ಟದಲ್ಲಿ ಕೌಶಲ್ಯ ಮಿಷನ್ ಘಟಕವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಗಳನ್ನು ಸ್ಥಾಪಿಸಿ ಅಧಿಕಾರಿ ಮತ್ತು ಪೂರಕ ಸಿಬ್ಬಂದಿಗಳನ್ನು ಸೃಜಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂ: ಕೌಉಜೀಇ 284 ಕೈತಇ 2017, ಬೆಂಗಳೂರು, ದಿನಾಂಕ: 26-09-2017**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕೌಶಲ್ಯ ಮಿಷನ್ ಘಟಕವನ್ನು ಸ್ಥಾಪಿಸಿ ಈ ಕೆಳಕಂಡಂತೆ ಅಧಿಕಾರಿ ಮತ್ತು ಪೂರಕ ಸಿಬ್ಬಂದಿಗಳನ್ನು ಸೃಜಿಸಿದೆ.

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆಗಳ ಸಂಖ್ಯೆ | ನೇಮಕಾತಿ | ವೇತನ ಶ್ರೇಣಿ |
|---|---|---|---|---|
| **ಆಡಳಿತ ಶಾಖೆ** | | | | |
| 1 | ನಿರ್ದೇಶಕರು | 01 | ಅಖಿಲ ಭಾರತೀಯ ಸೇವೆ / ಕೆಎಎಸ್/ಗ್ರಾಅಪ/ನಗರಾಭಿವೃದ್ಧಿ/ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ನಿಯೋಜನೆ | 52500-73000 |
| 2 | ಉಪ ನಿರ್ದೇಶಕರು | 01 | ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಅಥವಾ ಯಾವುದೆ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆ | 36300-53850 |
| 3 | ಸಹಾಯಕ ನಿರ್ದೇಶಕರು | 02 | ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಅಥವಾ ಯಾವುದೆ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆ | 24000-45300 |
| 4 | ಆಡಳಿತಾಧಿಕಾರಿಗಳು | 01 | ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನಿಯೋಜನೆ | 22800-43200 |
| 5 | ಕಚೇರಿ ಅಧೀಕ್ಷಕರು | 02 | ಮೇಲಿನಂತೆ | 20000-36300 |
| 6 | ಪ್ರ. ದ. ಸ. | 04 | ಮೇಲಿನಂತೆ | 14550-26700 |
| 7 | ದ್ವಿ. ದ. ಸ. | 04 | ಮೇಲಿನಂತೆ | 11600-21000 |
| 8 | ವಾಹನ ಚಾಲಕರು | 01 | ಮೇಲಿನಂತೆ | 11600-21000 |
| 9 | ಶೀಘ್ರಲಿಪಿಗಾರರು | 01 | ಹೊರಗುತ್ತಿಗೆ | 14550-26700 |
| 10 | ಬೆರಳಚ್ಚುಗಾರರು | 04 | ಹೊರಗುತ್ತಿಗೆ | 11600-21000 |
| 11 | ಗ್ರೂಪ್ 'ಡಿ' ವೃಂದ | 05 | ಹೊರಗುತ್ತಿಗೆ | 9600-14450 |

| | | | | |
|---|---|---|---|---|
| | [illegible] | | | |
| | ಒಟ್ಟು | 26 | | |
| ಲೆಕ್ಕಪತ್ರ ಶಾಖೆ | | | | |
| 12 | ಜಂಟಿ ನಿಯಂತ್ರಕರು | 01 | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ | 40050-56550 |
| 13 | ಸಹಾಯಕ ನಿಯಂತ್ರಕರು | 02 | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ | 28100-50100 |
| 14 | ಲೆಕ್ಕಪತ್ರ ಅಧೀಕ್ಷಕ | 02 | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ | 21600-40050 |
| 15 | ಪ್ರ. ದ. ಸ. | 02 | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ /ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನಿಯೋಜನೆ | 14550-26700 |
| 16 | ದ್ವಿ. ದ. ಸ. | 02 | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ /ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನಿಯೋಜನೆ | 11600-21000 |
| 17 | ವಾಹನ ಚಾಲಕರು | 01 | ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನಿಯೋಜನೆ | 11600-21000 |
| 18 | ಶೀಘ್ರಲಿಪಿಗಾರರು | 01 | ಹೊರಗುತ್ತಿಗೆ | 14550-26700 |
| 19 | ಬೆರಳಚ್ಚುಗಾರರು | 02 | ಹೊರಗುತ್ತಿಗೆ | 11600-21000 |
| 20 | ಗ್ರೂಪ್ 'ಡಿ' ವೃಂದ ನೌಕರರು | 03 | ಹೊರಗುತ್ತಿಗೆ | 9600-14450 |
| **ಒಟ್ಟು** | | 16 | | |
| **ಒಟ್ಟು ನಿರ್ದೇಶನಾಲಯಕ್ಕೆ** | | 42 | | |

ಕೌಶಲ್ಯ ಮಿಷನ್ ಘಟಕದ ಪ್ರಕಾರ್ಯಗಳು ಈ ಕೆಳಕಂಡಂತಿರುತ್ತವೆ.

1. ಕೌಶಲ್ಯಾಭಿವೃದ್ಧಿ ವಿಷಯಗಳು – ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ
2. ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಕೈಗೊಳ್ಳುವ ಇಲಾಖೆಗಳೊಂದಿಗೆ ಸಮನ್ವಯ
3. ವಿವಿಧ ಉದ್ಯೋಗ ವೃತ್ತಿ ತರಬೇತಿಗಾಗಿ ಅಭ್ಯರ್ಥಿಗಳ ಕ್ರೋಢೀಕರಣ
4. ವೃತ್ತಿ ತರಬೇತಿ ಸಂಸ್ಥೆಗಳ ಆಯ್ಕೆ ಮತ್ತು ಮಾನ್ಯತೆ, ವೃತ್ತಿವಾರು ಗುರಿಗಳ ಹಂಚಿಕೆ
5. ಕೈಗಾರಿಕೆಗಳೊಂದಿಗಿನ ಸಂಪರ್ಕ, ಪಠ್ಯಕ್ರಮ, ತರಬೇತಿ, ಗುಣಮಟ್ಟದ ತರಬೇತಿಗಾಗಿ ಸೂಕ್ತ ಉಸ್ತುವಾರಿ, ಮೌಲ್ಯಮಾಪನ, ಪ್ರಮಾಣೀಕರಣ
6. ಗುಣಮಟ್ಟಗಳ ಮಾನದಂಡ, ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಅತ್ಯುತ್ತಮ ಸಾಧನೆಗಳ ಅಳವಡಿಕೆ

ವೃತ್ತಿ ಮಾರ್ಗದರ್ಶನ, ಸಮಾಲೋಚನೆ, ಉದ್ಯೋಗ ನಿಯುಕ್ತಿ ಮತ್ತು ನಿಯುಕ್ತಿ ನಂತರ ಅನುಸರಣೆ

ಕೌಶಲ್ಯ ಮೇಳ ಹಾಗೂ ಉದ್ಯೋಗ ಮೇಳಗಳನ್ನು ಆಯೋಜಿಸುವುದು

ಮೇಲಿನ ವಿಷಯಗಳಲ್ಲಿ ಎಂಎಸ್‌ಡಿಇ, ಎನ್‌ಎಸ್ ಡಿಸಿ, ಎಸ್‌ಎಸ್‌ಸಿ ಗಳೊಂದಿಗೆ ಸಂಪರ್ಕ ಮತ್ತು ಮಾರ್ಗಸೂಚಿ ಅನುಸರಣೆ

10. ಕರ್ನಾಟಕ ಕೌಶಲ್ಯ ಮಿಷನ್ ವಿಷಯಗಳು

11. ಕರ್ನಾಟಕ ಕೌಶಲ್ಯ ಮಿಷನ್ ನಿಧಿಯ ನಿರ್ವಹಣೆ

12. ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಹಾಗೂ ಇತರೆ ಮೂಲಗಳಿಂದ ಅನುದಾನದ ಸ್ವೀಕೃತಿ, ವಿನಿಯೋಗ, ಆಂತರಿಕ ಮತ್ತು ಬಾಹ್ಯ ಲೆಕ್ಕ ಪರಿಶೋಧನೆ (ಆಡಿಟ್) ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ

13. ವಿವಿಧ ಇಲಾಖೆಗಳಿಗೆ, ಏಜೆನ್ಸಿಗಳಿಗೆ, ವೃತ್ತಿ ತರಬೇತಿ ಸಂಸ್ಥೆಗಳಿಗೆ ಹಣ ಬಿಡುಗಡೆ, ಲೆಕ್ಕಪತ್ರಗಳನ್ನಿಡುವುದು

14. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಮತ್ತು ಸಂಬಂಧಪಟ್ಟವರಿಗೆ ವರದಿಗಳ ಸಲ್ಲಿಕೆ

15. ಇತರೆ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳು

16. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ವಹಿಸುವ ಇತರೆ ಯಾವುದೇ ಕೆಲಸ ಕಾರ್ಯಗಳು

ಜಿಲ್ಲಾ ಕೌಶಲ್ಯ ಮಿಷನ್ನಿನ ಪ್ರಕಾರ್ಯಗಳನ್ನು ಕೈಗೊಳ್ಳಲು ಮತ್ತು ಜಿಲ್ಲಾ ಮಟ್ಟದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಗಳನ್ನು ಸ್ಥಾಪಿಸಿ ಈ ಕೆಳಕಂಡಂತೆ ಪ್ರತಿ ಜಿಲ್ಲೆಗೆ 10 ಹುದ್ದೆಗಳಂತೆ ಒಟ್ಟು 300 ಅಧಿಕಾರಿ ಮತ್ತು ಪೂರಕ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿದೆ.

| ಕ್ರ. ಸಂ | ಹುದ್ದೆ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ವೇತನ ಶ್ರೇಣಿ |
|---|---|---|---|---|
| 1 | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ | 01 | ಕೆಎಎಸ್/ಗ್ರಾಅಪ/ನಗರಾಭಿವೃದ್ಧಿ/ಕೈಗಾರಿಕೆ ಮತ್ತು ವಾಣಿಜ್ಯ /ಇತರೆ ಯಾವುದೇ ಇಲಾಖೆಯಿಂದ ನಿಯೋಜನೆ | 40050-56550 (ಶ್ರೇಣಿ ರಹಿತ) |
| 2 | ಸಹಾಯಕ ನಿಯಂತ್ರಕರು | 01 | ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ | 28100-50100 |
| 3 | ಸಹಾಯಕ ನಿರ್ದೇಶಕರು | 01 | ಉದ್ಯೋಗ ಮತ್ತು ತರಬೇತಿ ಇಲಾಖೆ/ಯಾವುದೇ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆ | 24000-45300 |

| | | | | |
|---|---|---|---|---|
| [illegible] | ಸಹಾಯಕ ಸಾಂಖ್ಯಿಕ ಅಧಿಕಾರಿ | 01 | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ನಿಯೋಜನೆ | 20000-36300 |
| 5 | ಪ್ರ. ದ. ಸ. | 01 | ಉದ್ಯೋಗ ಮತ್ತು ತರಬೇತಿ ಇಲಾಖೆ/ಯಾವುದೇ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆ | 14550-26700 |
| 6 | ದ್ವಿ. ದ. ಸ. | 01 | ಉದ್ಯೋಗ ಮತ್ತು ತರಬೇತಿ ಇಲಾಖೆ/ಯಾವುದೇ ಅಭಿವೃದ್ಧಿ ಇಲಾಖೆಯಿಂದ ನಿಯೋಜನೆ | 11600-21000 |
| 7 | ಬೆರಳಚ್ಚುಗಾರರು | 02 | ಹೊರಗುತ್ತಿಗೆ | 11600-21000 |
| 8 | ಗ್ರೂಪ್ 'ಡಿ' ವೃಂದ ನೌಕರರು | 02 | ಹೊರಗುತ್ತಿಗೆ | 9600-14450 |
| | ಒಟ್ಟು | 10 | | |

ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಯ ಪ್ರಕಾರ್ಯಗಳು ಈ ಕೆಳಕಂಡಂತಿರುತ್ತವೆ.

1. ಕೌಶಲ್ಯಾಭಿವೃದ್ಧಿ ವಿಷಯಗಳು – ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಮತ್ತು ಕರ್ನಾಟಕ ಶಿಶಿಕ್ಷು ಯೋಜನೆ
2. ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಕೈಗೊಳ್ಳುವ ಇಲಾಖೆಗಳೊಂದಿಗೆ ಜಿಲ್ಲಾಮಟ್ಟದಲ್ಲಿ ಸಮನ್ವಯ
3. ಜಿಲ್ಲಾಮಟ್ಟದಲ್ಲಿ ವಿವಿಧ ಉದ್ಯೋಗ ವೃತ್ತಿ ತರಬೇತಿಗಾಗಿ ಅಭ್ಯರ್ಥಿಗಳ ಕ್ರೋಢೀಕರಣ
4. ಜಿಲ್ಲಾವಾರು ವೃತ್ತಿ ತರಬೇತಿ ಸಂಸ್ಥೆಗಳ ಆಯ್ಕೆ ಮತ್ತು ಮಾನ್ಯತೆ, ವೃತ್ತಿವಾರು ಗುರಿಗಳ ಹಂಚಿಕೆಯಲ್ಲಿ ಜಿಲ್ಲಾ ಕೌಶಲ್ಯ ಮಿಷನ್ನಿಗೆ ನೆರವಾಗುವುದು.
5. ವೃತ್ತಿ ತರಬೇತಿ ಸಂಸ್ಥೆಗಳು ನಡೆಸುವ ತರಬೇತಿಗಳ ತಪಾಸಣೆ ಹಾಗೂ ಪ್ರಗತಿ ಪರಿಶೀಲನೆ.
6. ಜಿಲ್ಲಾಮಟ್ಟದಲ್ಲಿ ವೃತ್ತಿ ಮಾರ್ಗದರ್ಶನ, ಸಮಾಲೋಚನೆ, ಉದ್ಯೋಗ ನಿಯುಕ್ತಿ ಮತ್ತು ನಿಯುಕ್ತಿ ನಂತರದ ಅನುಸರಣೆ
7. ಜಿಲ್ಲಾ ಹಾಗೂ ಕೆಳಮಟ್ಟದಲ್ಲಿ ಕೌಶಲ್ಯ ಮೇಳ ಹಾಗೂ ಉದ್ಯೋಗ ಮೇಳಗಳನ್ನು ಆಯೋಜಿಸುವುದು
8. ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (CEDOK), ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC), ಕರ್ನಾಟಕ ಜರ್ಮನ್ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳಿಗೆ (KGMSDC)ಸಂಬಂಧಿಸಿದ ವಿಷಯಗಳು
9. ಜಿಲ್ಲಾ ಕೌಶಲ್ಯ ಮಿಷನ್ ವಿಷಯಗಳು

೧. ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಹಾಗೂ ಇತರೆ ಮೂಲಗಳಿಂದ ಅನುದಾನದ ಸ್ವೀಕೃತಿ ವಿನಿಯೋಗ, ಆಂತರಿಕ ಮತ್ತು ಬಾಹ್ಯ ಲೆಕ್ಕ ಪರಿಶೋಧನೆ (ಆಡಿಟ್) ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ

11. ವಿವಿಧ ಇಲಾಖೆಗಳಿಗೆ, ಏಜೆನ್ಸಿಗಳಿಗೆ, ವೃತ್ತಿ ತರಬೇತಿ ಸಂಸ್ಥೆಗಳಿಗೆ ಹಣ ಬಿಡುಗಡೆ, ಲೆಕ್ಕಪತ್ರಗಳನ್ನಿಡುವುದು

12. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಮತ್ತು ಸಂಬಂಧಪಟ್ಟವರಿಗೆ ವರದಿಗಳ ಸಲ್ಲಿಕೆ

13. ಇತರೆ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ವಿಷಯಗಳು

14. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ವಹಿಸುವ ಇತರೆ ಯಾವುದೇ ಕೆಲಸ ಕಾರ್ಯಗಳು

ಈ ಆದೇಶವು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಮೇಲಿನ ಕೌಶಲ್ಯ ಮಿಷನ್ ಘಟಕಕ್ಕೆ ನಿರ್ದೇಶಕರನ್ನಾಗಿ ಈಗಾಗಲೇ ಶ್ರೀ ಅಶ್ರಫುಲ್ ಹಸನ್ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 339 ಎಸ್‌ಎಎಸ್ 2017, ದಿನಾಂಕ:12-07-2017ರ ಮೂಲಕ ನೇಮಕ ಮಾಡಲಾಗಿದ್ದು, ನಿರ್ದೇಶಕರು, ಕೌಶಲ್ಯ ಮಿಷನ್ ಘಟಕ ಹುದ್ದೆಯು ಮಾತ್ರ ದಿನಾಂಕ: 12-07-2017ರಿಂದ ಜಾರಿಗೆ ಬಂದಿದೆ.

ಈ ಹುದ್ದೆಗಳ ವೆಚ್ಚವನ್ನು ಲೆಕ್ಕಶೀರ್ಷಿಕೆ 2230-02-001-0-03 ನಿರ್ದೇಶನ ಮತ್ತು ಆಡಳಿತದಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 586 ವೆಚ್ಚ - 9 2017, ದಿನಾಂಕ: 18-09-2017 ರ ಪ್ರಕಾರ ನೀಡಿದ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ಈರಣ್ಣ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ-ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 100 ಪ್ರತಿಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಒದಗಿಸಲು
2. ಮಹಾಲೇಖಪಾಲರು, (ಎ&ಇ), ಜಿಎಸ್.ಎಸ್.ಎ), ಇ &ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.